11/1

# 2006

## LAW

## Paper 1

*Time : 3 Hours ]* *[ Maximum Marks : 300*

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

$4 \times 5 = 20$

*Answer each question in about 50 words. Each question carries 5 marks.*

**1.** (a) Explain the fundamental postulates of Natural Justice.

(b) Discuss briefly the impact of the Proclamation of Emergency on Fundamental Rights.

(c) What is meant by 'Law-making treaty' ? Explain briefly.

(d) State the functions and powers of the General Assembly of the United Nations.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಸ್ವಾಭಾವಿಕ ನ್ಯಾಯದ ಮೂಲಭೂತ ಸೂತ್ರಗಳನ್ನು ವಿವರಿಸಿ.

(ಬಿ) ತುರ್ತು ಪರಿಸ್ಥಿತಿ ಘೋಷಣೆಯಿಂದ ಮೂಲಭೂತ ಹಕ್ಕುಗಳ ಮೇಲೆ ಆಗುವ ಪರಿಣಾಮವೇನು ? ಸಂಕ್ಷಿಪ್ತವಾಗಿ ಚರ್ಚಿಸಿ.

(ಸಿ) 'ಕಾನೂನು ರಚನಾ ಕೌಲು' ಎಂದರೇನು ? ಸಂಕ್ಷಿಪ್ತವಾಗಿ ವಿವರಿಸಿ.

(ಡಿ) ವಿಶ್ವಸಂಸ್ಥೆಯ ಸರ್ವಸದಸ್ಯರ ಸಭೆಯ ಪ್ರಕಾರ್ಯ ಮತ್ತು ಅಧಿಕಾರಗಳನ್ನು ನಿರೂಪಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** Explain the definition of 'State' for the purpose of implementation of the Directive Principles of State Policy.

**3.** Explain the restrictions on the 'Doctrine of Pleasure' under the Indian Constitution.

**4.** Discuss the concept of 'due process of law'. State its influence and impact on Article 21 of the Constitution.

**5.** Write a note on judicial and legislative controls on delegated legislation.

**6.** Explain the scope of the jurisdiction of the Supreme Court under Article 136 (Special leave to appeal) of the Indian Constitution.

**7.** Write a note on 'Acquiring territory by prescription'.

**8.** Explain briefly the different ways of peaceful settlement of disputes.

**9.** "The injured subject's only right is to claim through his State, as against the State responsible." — Elucidate.

**10.** How are treaties terminated ?

**11.** Explain the general principles of law recognised by civilised nations to deal with new situations in International Law.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** 'ರಾಜ್ಯ ನೀತಿಯ ನಿರ್ದೇಶಕ ತತ್ವ'ಗಳ ಅನುಷ್ಠಾನದ ಉದ್ದೇಶಕ್ಕಾಗಿ 'ರಾಜ್ಯ' ಎಂಬ ಪದವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ ? ವಿವರಿಸಿ.

**3.** ಭಾರತೀಯ ಸಂವಿಧಾನದ ಅಡಿಯಲ್ಲಿ 'ವಿಲಾಸ ಸಿದ್ಧಾಂತ'ದ ಮೇಲೆ ವಿಧಿಸಲಾದ ನಿರ್ಬಂಧಗಳೇನು ? ವಿವರಿಸಿ.

**4.** "ಕಾನೂನಿನ ಯುಕ್ತ ಕ್ರಮ" ದ ಪರಿಕಲ್ಪನೆಯ ಬಗ್ಗೆ ಚರ್ಚಿಸಿ. ಸಂವಿಧಾನದ 21ನೇ ಅನುಚ್ಛೇದದ ಮೇಲೆ ಇದರ ಪ್ರಭಾವ ಹಾಗೂ ಪರಿಣಾಮಗಳೇನು ? ನಿರೂಪಿಸಿ.

**5.** ಪ್ರತ್ಯಾಯೋಜಿತ ಕಾನೂನು ರಚನೆಯ ಮೇಲೆ ನ್ಯಾಯಿಕ ಹಾಗೂ ಶಾಸನಾತ್ಮಕ ನಿಯಂತ್ರಣಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

**6.** ಭಾರತೀಯ ಸಂವಿಧಾನದ 136 ನೇ ಅನುಚ್ಛೇದದ (ಅಪೀಲುಮಾಡುವ ವಿಶೇಷ ಅನುಮತಿ) ಅನ್ವಯ ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಅವಕಾಶವನ್ನು ಕುರಿತು ವಿವರಿಸಿ.

**7.** ಚಿರಭೋಗದ (Prescription) ಮೂಲಕ ಪ್ರದೇಶವನ್ನು ಅರ್ಜಿಸುವುದರ ಕುರಿತು ಒಂದು ಟಿಪ್ಪಣಿ ಬರೆಯಿರಿ.

**8.** ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ವಿವಿಧ ವಿಧಾನಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

**9.** "ಹಾನಿಗೀಡಾದ ಪ್ರಜೆಗಳಿಗಿರುವ ಏಕೈಕ ಹಕ್ಕೆಂದರೆ ಅದಕ್ಕೆ ಕಾರಣವಾದ ರಾಜ್ಯಕ್ಕೆ ಪ್ರತಿಯಾಗಿ ತನ್ನ ರಾಜ್ಯದ ಮೂಲಕ ಅಹವಾಲು ಸಲ್ಲಿಸುವುದು." — ಇದನ್ನು ವಿವರಿಸಿ.

**10.** ಕೌಲುಗಳನ್ನು ಯಾವ ರೀತಿ ಕೊನೆಗಾಣಿಸಲಾಗುತ್ತದೆ ?

**11.** ಅಂತರರಾಷ್ಟ್ರೀಯ ಕಾನೂನಿನಲ್ಲಿ ಹೊಸ ಪರಿಸ್ಥಿತಿಗಳ ಬಗ್ಗೆ ವ್ಯವಹರಿಸುವುದಕ್ಕಾಗಿ ನಾಗರಿಕ ರಾಷ್ಟ್ರಗಳು ಮನ್ನಣೆ ನೀಡಿರುವ ಸಾಮಾನ್ಯ ಕಾನೂನು ತತ್ವಗಳು ಯಾವುವು ? ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** (a) 'Indian Constitution is quasi-federal.' — Elucidate.

(b) Parliament made a law with respect to one of the entries in List III, VII Schedule. A State Legislature, in view of the peculiar circumstances existing in the State, wants to amend the law made by the Parliament. Discuss the constitutional procedure, if any, to be followed.

**13.** (a) Discuss the Fundamental Rights of an accused under the Indian Constitution.

(b) Mr. X was accused of committing an offence of forgery. He was in possession of a document which contained his signature. The honourable court ordered production of such document for the purpose of comparison of his signature. Does this violate any of the rights of the accused ? Decide, giving reasons.

**14.** (a) Distinguish between writ jurisdiction under Article 32 and Article 226 of the Constitution.

(b) Mr. X, contested for the post of President of India. He was defeated by Y, by an overwhelming majority of votes. Aggrieved by the election result, Mr. X filed an Election Petition, in the High Court of Delhi, challenging the election of Y, on several grounds. Before the parties are heard, would you like to raise any valid preliminary objections to the petition ? Give your reasoned arguments.

**15.** (a) Explain the Monistic theory relating to International Law and Municipal Law.

(b) A French steamer was involved in a collision on the high seas with a Turkish collier. The latter vessel sank and eight persons died as a result. The Turkish authorities arrested the French officer, responsible for the collision, when the ship reached a Turkish port. The French officer was charged with manslaughter. France protested strongly against this action, alleging that Turkey did not have the jurisdiction to try the offence. Decide, stating the grounds for your decision.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** (ಎ) "ಭಾರತದ ಸಂವಿಧಾನವು ಸಂಯುಕ್ತ ಸ್ವರೂಪದ್ದಾಗಿದೆ." — ವಿವರಿಸಿ.

(ಬಿ) ಪಟ್ಟಿ III, VII ನೇ ಅನುಸೂಚಿಯಲ್ಲಿರುವ ಒಂದು ನಮೂದಿಗೆ ಸಂಬಂಧಿಸಿದಂತೆ ಸಂಸತ್ತು ಒಂದು ಕಾನೂನನ್ನು ಮಾಡಿತು. ಒಂದು ರಾಜ್ಯದ ವಿಧಾನ ಮಂಡಲವು ತನ್ನ ರಾಜ್ಯದ ಒಂದು ವಿಚಿತ್ರ ಸನ್ನಿವೇಶದ ದೃಷ್ಟಿಯಿಂದ, ಸಂಸತ್ತು ಮಾಡಿದ ಈ ಕಾನೂನಿಗೆ ತಿದ್ದುಪಡಿ ತರಬೇಕೆಂದು ಬಯಸುತ್ತದೆ. ರಾಜ್ಯವು ಯಾವ ರೀತಿಯ ಸಂವಿಧಾನಾತ್ಮಕ ನಡವಳಿಯನ್ನು ಅನುಸರಿಸಬೇಕು ? ಚರ್ಚಿಸಿ.

**13.** (ಎ) ಭಾರತೀಯ ಸಂವಿಧಾನದ ಅಡಿಯಲ್ಲಿ ಒಬ್ಬ ಅಪಾದಿತ ವ್ಯಕ್ತಿಗೆ ಇರುವ ಮೂಲಭೂತ ಹಕ್ಕುಗಳೇನು ಎಂಬ ಬಗ್ಗೆ ಚರ್ಚಿಸಿ.

(ಬಿ) X ಎಂಬಾತನ ಮೇಲೆ ಫೋರ್ಜರಿ ಮಾಡಿದ ಆಪಾದನೆಯನ್ನು ಹೊರಿಸಲಾಗಿದೆ. ಆತನ ಬಳಿ, ಆತನ ಸಹಿ ಇರುವ ಒಂದು ದಸ್ತಾವೇಜು ಇದೆ. ಆತನ ಸಹಿಯ ತಾಳೆ ನೋಡುವುದಕ್ಕಾಗಿ ನ್ಯಾಯಾಲಯವು ಆ ದಸ್ತಾವೇಜನ್ನು ಹಾಜರುಪಡಿಸುವಂತೆ ಆದೇಶ ನೀಡುತ್ತದೆ. ಹೀಗೆ ಕೇಳುವುದು ಅಪಾದಿತನ ಯಾವುದಾದರೂ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗುವುದೆ ? ಕಾರಣಗಳೊಂದಿಗೆ ನಿಮ್ಮ ತೀರ್ಮಾನಕ್ಕೆ ಕಾರಣಗಳನ್ನು ಕೊಡಿ.

**14.** (ಎ) ಸಂವಿಧಾನದ 32 ಮತ್ತು 226 ನೇ ಅನುಚ್ಛೇದಗಳ ಅಡಿಯಲ್ಲಿರುವ 'ರಿಟ್' ಅಧಿಕಾರ ವ್ಯಾಪ್ತಿಯ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

(ಬಿ) X ಎಂಬಾತನು ಭಾರತದ ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸುತ್ತಾನೆ. Y ಎಂಬಾತನು ಭಾರೀ ಬಹುಮತದ ಅಂತರದಿಂದ ಆತನನ್ನು ಸೋಲಿಸುತ್ತಾನೆ. ಚುನಾವಣಾ ಫಲಿತಾಂಶದಿಂದ ನೊಂದ X, ವಿವಿಧ ಆಧಾರಗಳ ಮೇಲೆ Y ಎಂಬಾತನ ಆಯ್ಕೆಯನ್ನು ಪ್ರಶ್ನಿಸಿ ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಒಂದು ಚುನಾವಣಾ ಅರ್ಜಿಯನ್ನು ಸಲ್ಲಿಸುತ್ತಾನೆ. ಇವರಿಬ್ಬರ ವಿಚಾರಣೆ ನಡೆಯುವುದಕ್ಕೂ ಮೊದಲು ಈ ಅರ್ಜಿಯ ಬಗ್ಗೆ ನೀವು ಯಾವುದಾದರೂ ಸಮಂಜಸವಾದ ಪ್ರಾರಂಭಿಕ ಆಕ್ಷೇಪಣೆ ಎತ್ತಲು ಇಚ್ಛಿಸುತ್ತೀರ ? ಸೂಕ್ತವಾದ ವಾದವನ್ನು ಮಂಡಿಸಿ.

**15.** (ಎ) ಅಂತರರಾಷ್ಟ್ರೀಯ ಕಾನೂನು ಹಾಗೂ ಮುನಿಸಿಪಲ್ ಕಾನೂನಿಗೆ ಸಂಬಂಧಿಸಿದ ಏಕತತ್ವವಾದಿ (ಮಾನಿಸ್ಟಿಕ್) ಸಿದ್ಧಾಂತವನ್ನು ವಿವರಿಸಿ.

(ಬಿ) ಫ್ರಾನ್ಸ್ ದೇಶದ ಒಂದು ಹಡಗು ನಡುಸಮುದ್ರದಲ್ಲಿ ಟರ್ಕಿ ದೇಶದ ಒಂದು ಕಲ್ಲಿದ್ದಲು ಹೊರುವ ನೌಕೆಗೆ ಢಿಕ್ಕಿ ಹೊಡೆಯುತ್ತದೆ. ಈ ಪರಿಣಾಮವಾಗಿ ಟರ್ಕಿ ದೇಶದ ನೌಕೆಯು ಮುಳುಗಿ ಎಂಟು ಮಂದಿ ಮೃತರಾಗುತ್ತಾರೆ. ಫ್ರಾನ್ಸಿನ ಹಡಗು ಟರ್ಕಿಯ ಬಂದರನ್ನು ತಲುಪಿದಾಗ ಅಲ್ಲಿನ ಅಧಿಕಾರಿಗಳು ಫ್ರೆಂಚ್ ಅಧಿಕಾರಿಯನ್ನು ಬಂಧಿಸುತ್ತಾರೆ. ಫ್ರೆಂಚ್ ಅಧಿಕಾರಿಯ ಮೇಲೆ ನರಹತ್ಯೆಯ ಆರೋಪ ಹೊರಿಸಲಾಗುತ್ತದೆ. ಈ ಅಪರಾಧದ ವಿಚಾರಣೆ ನಡೆಸುವ ಅಧಿಕಾರವ್ಯಾಪ್ತಿ ಟರ್ಕಿಗೆ ಇಲ್ಲವೆಂದು ಆಪಾದಿಸಿ, ಈ ಕ್ರಮದ ಬಗ್ಗೆ ಫ್ರಾನ್ಸ್ ದೇಶವು ತೀವ್ರ ವಿರೋಧ ವ್ಯಕ್ತಪಡಿಸುತ್ತದೆ. ಈ ನಿರ್ಣಯಕ್ಕೆ ಆಧಾರಗಳೇನು ಎಂಬುದನ್ನು ವಿವರಿಸಿ ತೀರ್ಮಾನ ಮಾಡಿ.

**16.** (a) What is meant by 'State Succession' ?

(b) The Sultan of Johore, while staying in Great Britain, assumed the name of Albert Baker. The Sultan became friendly with Miss Mighell and later promised to marry her, but failed. So, Miss Mighell sued him for breach of promise of marriage, claiming damages. State whether British courts have jurisdiction to try the case.

**17.** (a) What is meant by 'Piracy' ? What are the essential ingredients of an act of piracy ?

(b) Meunier was an anarchist. The party with which he identified himself was the enemy of all governments. Meunier had caused explosions in a Paris cafe and in army barracks. Later, he fled to England. The French Government demanded his extradition, on the above charges, from Great Britain. Meunier set up the plea that no extradition can be claimed for political offences. Decide, giving reasons, whether he can be extradited.

**16.** (ಎ) "ರಾಜ್ಯ ಉತ್ತರಾಧಿಕಾರಿ" ಎಂದರೇನು ?

(ಬಿ) ಜೊಹೊರ್ ಸುಲ್ತಾನನು ಗ್ರೇಟ್ ಬ್ರಿಟನ್‌ನಲ್ಲಿದ್ದಾಗ ಅಲ್ಬರ್ಟ್ ಬೇಕರ್ ಎಂಬ ನಾಮಧೇಯ ಹೊಂದಿದ್ದ. ಮಿಘೆಲ್ ಎಂಬಾಕೆಯ ಸ್ನೇಹ ಗಳಿಸಿದ. ಆತ ಅಕೆಯನ್ನು ಮದುವೆಯಾಗುವುದಾಗಿ ಮಾತುಕೊಟ್ಟಿದ್ದರೂ, ಅನಂತರ ಕೊಟ್ಟ ಮಾತಿಗೆ ತಪ್ಪಿದ. ಮದುವೆಯ ವಚನವನ್ನು ಉಲ್ಲಂಘಿಸಿದ್ದಕ್ಕಾಗಿ ಮಿಘೆಲ್, ಅತನ ವಿರುದ್ಧ ದಾವೆ ಹೂಡಿ ಪರಿಹಾರವನ್ನು ಕೋರಿದಳು. ಈ ಮೊಕದ್ದಮೆಯ ವಿಚಾರಣೆ ನಡೆಸುವ ಅಧಿಕಾರವ್ಯಾಪ್ತಿ ಬ್ರಿಟಿಷ್ ನ್ಯಾಯಾಲಯಗಳಿಗಿದೆಯೆ ? ವಿವರಿಸಿ.

**17.** (ಎ) 'ಪೈರೆಸಿ' ಎಂದರೇನು ? ಒಂದು ಕೃತ್ಯವು ಪೈರೆಸಿ ಎನಿಸಿಕೊಳ್ಳಬೇಕಾದರೆ ಅದು ಯಾವ ಅಂಶಗಳನ್ನು ಹೊಂದಿರಬೇಕು ?

(ಬಿ) ಮೆನಿಯರ್ ಎಂಬಾತನು ಒಬ್ಬ ಅರಾಜಕತಾವಾದಿ. ಅತ ಯಾವ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದನೋ ಅದು ಎಲ್ಲ ಸರ್ಕಾರಗಳಿಗೂ ವೈರಿಯಾಗಿತ್ತು. ಒಂದು ಪ್ಯಾರಿಸ್ ಕೆಫೆಯಲ್ಲಿ ಹಾಗೂ ಸೈನ್ಯದ ಬ್ಯಾರಕ್‌ಗಳಲ್ಲಿ ಮೆನಿಯರ್ ಅನೇಕ ಸ್ಫೋಟಗಳನ್ನು ನಡೆಸಿದ್ದ. ಅನಂತರ ಆತ ಇಂಗ್ಲೆಂಡಿಗೆ ಪರಾರಿಯಾದ. ಮೇಲ್ಕಂಡ ಅರೋಪಗಳ ಹಿನ್ನೆಲೆಯಲ್ಲಿ ಅತನನ್ನು ಗ್ರೇಟ್ ಬ್ರಿಟನ್ ತನ್ನ ವಶಕ್ಕೆ ಕೊಡಬೇಕೆಂದು ಫ್ರೆಂಚ್ ಸರ್ಕಾರವು ಆಗ್ರಹಿಸಿತು. ರಾಜಕೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಹೀಗೆ ಕೈವಶಮಾಡುವಂತೆ ಕೇಳುವಹಾಗಿಲ್ಲ ಎಂಬ ವಾದವನ್ನು ಮೆನಿಯರ್ ಮಂಡಿಸಿದ. ಆತನನ್ನು ಕೈವಶಮಾಡಬಹುದೆ. ಎಂಬುದನ್ನು ಸೂಕ್ತ ಕಾರಣಗಳೊಂದಿಗೆ ತೀರ್ಮಾನಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** Discuss the scope and content of 'protective discrimination' under Article 16(4) of the Constitution of India, in the light of judicial pronouncements of the Supreme Court of India.

**19.** Discuss the features of the Parliamentary form of Government as enunciated in the Constitution of India.

**20.** Critically examine the diverse modes of amendments contemplated under the Constitution of India. Are there any limits to the amending process of the Constitution ?

**21.** Elucidate the extent of jurisdiction which a State exercises.

**22.** What is meant by 'recognition of States' ? When does it arise ? State the theories relating to this.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಿಕ ತೀರ್ಪುಗಳ ಹಿನ್ನೆಲೆಯಲ್ಲಿ, ಭಾರತೀಯ ಸಂವಿಧಾನದ 16(4) ನೇ ಅನುಚ್ಛೇದದ ಅನ್ವಯ ಸಂರಕ್ಷಕ ತಾರತಮ್ಯದ ವ್ಯಾಪ್ತಿ ಹಾಗೂ ಅದು ಒಳಗೊಂಡಿರುವ ಅಂಶಗಳನ್ನು ಕುರಿತು ಚರ್ಚಿಸಿ.

**19.** ಭಾರತೀಯ ಸಂವಿಧಾನದಲ್ಲಿ ನಿರೂಪಿಸಲ್ಪಟ್ಟಿರುವಂತೆ ಸಂಸದೀಯ ರೂಪದ ಸರ್ಕಾರದ ಲಕ್ಷಣಗಳ ಬಗ್ಗೆ ಚರ್ಚಿಸಿ.

**20.** ಭಾರತೀಯ ಸಂವಿಧಾನದಲ್ಲಿ ಅನುಸಂಧಾನ ಮಾಡಲಾಗಿರುವ ವಿವಿಧ ಮಾದರಿಯ ತಿದ್ದುಪಡಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಪರಿಶೀಲಿಸಿ. ಸಂವಿಧಾನದ ತಿದ್ದುಪಡಿ ಪ್ರಕ್ರಿಯೆಗಳಿಗೆ ಏನಾದರೂ ಮಿತಿಗಳಿವೆಯೆ ? ತಿಳಿಸಿ.

**21.** ಒಂದು ರಾಜ್ಯವು ನಿರ್ವಹಿಸಬಹುದಾದ ಅಧಿಕಾರ ವ್ಯಾಪ್ತಿ ಎಷ್ಟಿರುತ್ತದೆ ಎಂಬುದನ್ನು ನಿರೂಪಿಸಿ.

**22.** 'ರಾಜ್ಯಗಳಿಗೆ ಮನ್ನಣೆ ನೀಡುವುದು' ಎಂದರೇನು ? ಇದು ಯಾವಾಗ ಉದ್ಭವಿಸುತ್ತದೆ ? ಇದಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ತಿಳಿಸಿ.

[Turn over

11/2

# 2006

## LAW

## Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory***.*
*Answer any* **three** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) How has the Indian Penal Code provided for the requirement of *mens rea* in the offences stated in the Indian Penal Code ?

   (b) Explain what constitutes 'Publication' for the tort of defamation.

   (c) State the difference between 'Void' and 'Voidable' agreements.

   (d) Explain briefly the definition of 'Promissory note'.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಭಾರತೀಯ ದಂಡ ಸಂಹಿತೆಯಲ್ಲಿ ನಿರೂಪಿಸಲಾಗಿರುವ ಅಪರಾಧಗಳಲ್ಲಿ ಒಂದು ಅಪರಾಧವು *mens rea* ಅನಿಸಿಕೊಳ್ಳಲು ಏನೇನು ಅಂಶಗಳಿರಬೇಕು ಎಂದು ಭಾರತೀಯ ದಂಡ ಸಂಹಿತೆಯಲ್ಲಿ ತಿಳಿಸಲಾಗಿದೆ ?

(ಬಿ) ಮಾನನಷ್ಟ ಅಪಕೃತ್ಯದಲ್ಲಿ 'ಪ್ರಕಟಣೆ' ಎಂಬುದು ಯಾವಯಾವ ಅಂಶಗಳನ್ನು ಒಳಗೊಳ್ಳುತ್ತದೆ ?

(ಸಿ) ಶೂನ್ಯ ಮತ್ತು ಶೂನ್ಯಕರಣೀಯ ಒಪ್ಪಂದಗಳ ಮಧ್ಯೆ ವ್ಯತ್ಯಾಸವೇನು ?

(ಡಿ) "ಪ್ರಾಮಿಸರಿ ನೋಟ್" ಎಂದರೇನು ? ಸಂಕ್ಷಿಪ್ತವಾಗಿ ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** A doctor, after examining the patient, tells him that he will not live beyond one week. The patient dies as a result of hearing the doctor. The doctor is prosecuted for the death. Decide, giving reasons.

**3.** X promises to hire his lorry for one month, from August 1 to August 31, 2006 to Y, an election candidate. But, on July 2, X tells Y that he will not provide the lorry. Y sues X for breach of contract on August 1, 2006. But, on July 25, the Election Commissioner, by virtue of his statutory authority, requisitions for election purposes, all lorries, including that of X. Decide, if Y can succeed. Will X have any defence ?

**4.** Due to heavy rains, the footpath (in the compound of M) leading to the house of M had become slippery. The postman, while walking carefully on this slippery path, fell down and sustained severe injuries. The postman had come to deliver a registered letter addressed to M. The postman sues M for damages. M denies his liability. Decide, giving reasons.

**5.** P has entrusted a golden ring to A, a mercantile agent, authorising him to sell it, for cash only, to any person who offers Rs. 5,000 and above. A pledges the ring to B for Rs. 4,000. P is very much annoyed with A. P wants to sue B and claim the ring. Will he succeed ? Give reasons for your answer.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಒಬ್ಬ ವೈದ್ಯನು ರೋಗಿಯನ್ನು ಪರೀಕ್ಷಿಸಿದನಂತರ, 'ನೀನು ಇನ್ನು ಒಂದು ವಾರಕ್ಕಿಂತ ಹೆಚ್ಚು ಬದುಕಲಾರೆ' ಎಂದು ತಿಳಿಸುತ್ತಾನೆ. ಈ ಮಾತನ್ನು ಕೇಳಿದ ರೋಗಿ ತೀರಿಕೊಳ್ಳುತ್ತಾನೆ. ಈ ಸಾವಿಗಾಗಿ ವೈದ್ಯನನ್ನು ವಿಚಾರಣೆಗೆ ಒಳಪಡಿಸಲಾಗುತ್ತದೆ. ನೀವು ಹೇಗೆ ತೀರ್ಮಾನಿಸುತ್ತೀರಿ ? ಕಾರಣಗಳನ್ನು ಕೊಡಿ.

**3.** X ಎಂಬಾತನು ಚುನಾವಣಾ ಅಭ್ಯರ್ಥಿಯಾಗಿದ್ದ Y ಎಂಬಾತನಿಗೆ ತನ್ನ ಲಾರಿಯನ್ನು 2006 ನೇ ಇಸವಿಯ ಆಗಸ್ಟ್ 1 ರಿಂದ ಆಗಸ್ಟ್ 31ರ ವರೆಗೆ ಒಂದು ತಿಂಗಳ ಕಾಲ ಬಾಡಿಗೆಗೆ ನೀಡುವುದಾಗಿ ಮಾತುಕೊಡುತ್ತಾನೆ. ಆದರೆ, ಜುಲೈ 2ನೇ ತಾರೀಖಿನಂದು ಆತ ತಾನು ಲಾರಿಯನ್ನು ಕೊಡುವುದಿಲ್ಲ ಎಂದು Y ಗೆ ಹೇಳುತ್ತಾನೆ. ಒಪ್ಪಂದದ ಉಲ್ಲಂಘನೆಗಾಗಿ 2006 ರ ಆಗಸ್ಟ್ 1 ರಂದು X ಮೇಲೆ Y ದಾವೆ ಹೂಡುತ್ತಾನೆ. ಆದರೆ ಜುಲೈ 25 ರಂದು, ಚುನಾವಣಾ ಆಯುಕ್ತರು ತಮಗಿರುವ ಶಾಸನಬದ್ಧ ಅಧಿಕಾರಬಲದಿಂದ ಚುನಾವಣಾ ಉದ್ದೇಶಕ್ಕಾಗಿ ಎಲ್ಲ ಲಾರಿಗಳನ್ನೂ ತೆಗೆದುಕೊಳ್ಳುತ್ತಾರೆ. ಇದರಲ್ಲಿ X ನ ಲಾರಿಯೂ ಸೇರಿರುತ್ತದೆ. ಈ ಮೊಕದ್ದಮೆಯಲ್ಲಿ Y ಗೆಲ್ಲುತ್ತಾನೆಯೆ ? X ಗೆ ಪ್ರತಿರಕ್ಷಣೆಯ ಅವಕಾಶ ಇದೆಯೆ ?

**4.** ಭಾರೀ ಮಳೆಯ ಕಾರಣದಿಂದಾಗಿ M ಎಂಬುವರ ಮನೆಯ ಕಡೆಗಿರುವ ಪಾದಚಾರಿ ರಸ್ತೆಯು (ಇದು M ರವರ ಕಾಂಪೌಂಡಿನಲ್ಲಿದೆ) ತುಂಬಾ ಜಾರುತ್ತಿರುತ್ತದೆ. ಹೀಗೆ ಜಾರುವ ಪಾದಚಾರಿ ರಸ್ತೆಯ ಮೇಲೆ ಎಚ್ಚರಿಕೆಯಿಂದ ನಡೆದು ಬರುತ್ತಿದ್ದ ಅಂಚೆ ಪೇದೆಯು ಜಾರಿ ಬಿದ್ದು ಆತನಿಗೆ ಗಂಭೀರ ಸ್ವರೂಪದ ಗಾಯಗಳಾಗುತ್ತವೆ. ಅಂಚೆ ಪೇದೆಯು M ಅವರ ವಿಳಾಸಕ್ಕೆ ಬಂದಿದ್ದ ರಿಜಿಸ್ಟರ್ಡ್ ಪತ್ರವನ್ನು ತಲುಪಿಸುವುದಕ್ಕಾಗಿ ಅಲ್ಲಿಗೆ ಬಂದಿರುತ್ತಾನೆ. ಅಂಚೆ ಪೇದೆಯು ಹಾನಿ ಪರಿಹಾರಕ್ಕಾಗಿ M ವಿರುದ್ಧ ದಾವೆ ಹೂಡುತ್ತಾನೆ. ಇದರಲ್ಲಿ ತನ್ನ ಹೊಣೆ ಏನೂ ಇಲ್ಲ ಎಂದು M ನಿರಾಕರಿಸುತ್ತಾರೆ. ಸೂಕ್ತ ಆಧಾರಗಳೊಂದಿಗೆ ತೀರ್ಮಾನ ಹೇಳಿ.

**5.** P ಎಂಬಾತನು ಒಂದು ಬಂಗಾರದ ಉಂಗುರವನ್ನು A ಎಂಬ ವಾಣಿಜ್ಯ ಏಜೆಂಟ್‌ನಿಗೆ ಕೊಟ್ಟು ಅದಕ್ಕೆ 5,000 ರೂ. ಅಥವಾ ಅದಕ್ಕಿಂತ ಹೆಚ್ಚು ನೀಡುವ ಯಾವುದೇ ವ್ಯಕ್ತಿಗೆ ನಗದು ಹಣಕ್ಕೆ ಮಾರಬೇಕೆಂದು ತಿಳಿಸಿರುತ್ತಾನೆ. ಆದರೆ, ಈ ಉಂಗುರವನ್ನು A ಯು B ಎಂಬಾತನಲ್ಲಿ 4,000 ರೂ.ಗಳಿಗೆ ಒತ್ತೆ ಇಡುತ್ತಾನೆ. ಇದರಿಂದ A ಬಗ್ಗೆ P ಸಿಟ್ಟಿಗೇಳುತ್ತಾನೆ ಮತ್ತು B ಯ ವಿರುದ್ಧ ದಾವೆ ಹೂಡಿ ಆ ಉಂಗುರವನ್ನು ಪಡೆಯಲು ಆಲೋಚಿಸುತ್ತಾನೆ. ಆತ ಯಶಸ್ವಿಯಾಗುವನೆ ? ನಿಮ್ಮ ಉತ್ತರವನ್ನು ಕಾರಣಗಳೊಂದಿಗೆ ವಿವರಿಸಿ.

[Turn over

**6.** Om sold his car for Rs. 50,000 to Prakash. Prakash gave Om a cheque for the amount. The cheque was dishonoured when presented to the Bank. But, in the meantime, Prakash sold the same car to Pradeep for Rs. 40,000 and collected cash. Om, not having received the money, complained to the Police and also sued Pradeep for the recovery of the car or for Rs. 50,000. Decide, giving reasons, as to who is entitled to the car.

**7.** An Italian was travelling on an Indian ship. He murdered an Australian passenger, when the ship was anchored within the territorial waters of Great Britain. Later on, the Italian was traced in Trivandrum. Indian officials want to prosecute him in Trivandrum courts. Is it possible ? Decide, giving reasons. Can the Indian Penal Code be made applicable to a foreigner ?

**8.** X purchased from Y a machine for Rs. 5 lakhs. As per the contract, Y was to erect and commission the machine, for which an additional charge of Rs. 20,000 was to be paid. Y having failed to supply and commission the machine, X approaches the Consumer Forum for relief. Y challenges the jurisdiction of the Consumer Forum. Decide, stating your reasons for your decision.

**9.** A Minister's daughter was getting married. A friend of the Minister was seeking a favour from the Minister. He gave a brand new car, worth Rs. 8 lakhs to the bride on the occasion of the marriage. Is it a bribe or 'dowry' ? Does this constitute 'dowry' under the Dowry Prohibition Act, 1961 ?

**10.** On the ground of untouchability, X, a Harijan, has not been allowed access to a place of public entertainment. A complaint is filed. But, the investigating officer neglects investigating the complaint. Does this bring about any liability under the Protection of Civil Rights Act, 1955 ?

6. ಓಂ ಎಂಬಾತನು ತನ್ನ ಕಾರನ್ನು ಪ್ರಕಾಶ್ ಎಂಬಾತನಿಗೆ 50,000 ರೂ. ಗಳಿಗೆ ಮಾರುತ್ತಾನೆ. ಪ್ರಕಾಶ್, ಈ ಹಣಕ್ಕಾಗಿ ಒಂದು ಚೆಕ್ ನೀಡುತ್ತಾನೆ. ಬ್ಯಾಂಕಿಗೆ ಚೆಕ್ ನೀಡಿದಾಗ ಅದು ತಿರಸ್ಕೃತವಾಗುತ್ತದೆ. ಆದರೆ, ಈ ವೇಳೆಗಾಗಲೇ ಪ್ರಕಾಶ್ ಆ ಕಾರನ್ನು ಪ್ರದೀಪ್ ಎಂಬಾತನಿಗೆ 40,000 ರೂ.ಗಳಿಗೆ ಮಾರಿ ನಗದನ್ನು ಪಡೆದಿರುತ್ತಾನೆ. ಹಣ ವಸೂಲಾಗದಿದ್ದಕ್ಕಾಗಿ ಓಂ ಪೋಲೀಸರಿಗೆ ದೂರು ನೀಡುತ್ತಾನೆ ಮತ್ತು ಕಾರನ್ನು ಕೊಡಬೇಕು ಇಲ್ಲವೆ 50,000 ರೂ. ನೀಡಬೇಕು ಎಂದು ಪ್ರದೀಪ್ ವಿರುದ್ಧ ದಾವೆ ಹೂಡುತ್ತಾನೆ. ಈ ಕಾರಿನ ಮೇಲೆ ಯಾರಿಗೆ ಹಕ್ಕಿದೆ ಎಂಬುದನ್ನು ಆಧಾರಸಹಿತ ನಿರೂಪಿಸಿ.

7. ಇಟಲಿಯ ವ್ಯಕ್ತಿಯೊಬ್ಬ ಒಂದು ಭಾರತೀಯ ಹಡಗಿನಲ್ಲಿ ಪ್ರಯಾಣಿಸುತ್ತಿದ್ದ. ಗ್ರೇಟ್ ಬ್ರಿಟನ್ನಿನ ಜಲಗಡಿ ಪ್ರದೇಶದೊಳಗೆ ಹಡಗು ಲಂಗರು ಹಾಕುವ ಸಮಯಕ್ಕೆ ಆತ ಆಸ್ಟ್ರೇಲಿಯನ್ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿದ. ಆನಂತರ, ತಿರುವನಂತಪುರದಲ್ಲಿ ಇಟಲಿಯ ವ್ಯಕ್ತಿಯ ಪತ್ತೆಯಾಯಿತು. ಭಾರತದ ಅಧಿಕಾರಿಗಳು ಆತನನ್ನು ತಿರುವನಂತಪುರ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಲು ಇಚ್ಛಿಸಿದರು. ಇದು ಸಾಧ್ಯವೆ ? ಭಾರತೀಯ ದಂಡ ಸಂಹಿತೆಯನ್ನು ವಿದೇಶೀ ವ್ಯಕ್ತಿಗೆ ಅನ್ವಯಿಸಬಹುದೆ ಎಂಬುದನ್ನು ಕಾರಣಸಹಿತವಾಗಿ ನಿರೂಪಿಸಿ.

8. X ಎಂಬಾತನು Y ಎಂಬಾತನಿಂದ 5 ಲಕ್ಷ ರೂ.ಗಳಿಗೆ ಒಂದು ಯಂತ್ರವನ್ನು ಖರೀದಿಸಿದ. ಕರಾರಿನ ಪ್ರಕಾರ, Y ಎಂಬಾತನೇ ಈ ಯಂತ್ರದ ಸ್ಥಾಪನೆ ಹಾಗೂ ಕಾರ್ಯಾರಂಭವನ್ನು ಮಾಡಿಕೊಡಬೇಕಾಗಿತ್ತು. ಇದಕ್ಕಾಗಿ ಆತ ಇನ್ನೂ 20,000 ರೂ.ಗಳನ್ನು ಸಂದಾಯ ಮಾಡಬೇಕಿತ್ತು. ಆದರೆ, Y ಇದಕ್ಕೆ ತಪ್ಪಿದ. ಪರಿಹಾರವನ್ನು ಕೋರಿ X ಎಂಬಾತನು ಗ್ರಾಹಕರ ವೇದಿಕೆಗೆ ಮನವಿ ಸಲ್ಲಿಸಿದ. ಗ್ರಾಹಕರ ವೇದಿಕೆಯ ಅಧಿಕಾರ ವ್ಯಾಪ್ತಿ ಕುರಿತು Y ಪ್ರಶ್ನಿಸಿದ. ನೀವು ಹೇಗೆ ತೀರ್ಮಾನಿಸುತ್ತೀರಿ ? ನಿಮ್ಮ ತೀರ್ಮಾನಕ್ಕೆ ಕಾರಣಗಳೇನು ? ವಿವರಿಸಿ.

9. ಸಚಿವರೊಬ್ಬರ ಮಗಳ ಮದುವೆ ನಡೆದಿತ್ತು. ಸಚಿವರಿಂದ ಯಾವುದೋ ಅನುಗ್ರಹ ಬಯಸಿದ್ದ ಅವರ ಸ್ನೇಹಿತನೊಬ್ಬ, ಮದುವೆಯ ಸಂದರ್ಭದಲ್ಲಿ ಸಚಿವರ ಮಗಳಿಗೆ 8 ಲಕ್ಷ ರೂ. ಬೆಲೆಬಾಳುವ ಹೊಚ್ಚ ಹೊಸ ಕಾರನ್ನು ಮದುವೆಯ ಉಡುಗೊರೆಯಾಗಿ ನೀಡಿದ. ಇದನ್ನು ಲಂಚ ಎನ್ನಬೇಕೆ ? ವರದಕ್ಷಿಣೆ ಎನ್ನ ಬೇಕೆ ? ವರದಕ್ಷಿಣೆ ನಿಷೇಧ ಕಾಯಿದೆ, 1961 ರ ಅನ್ವಯ ಇದು 'ವರದಕ್ಷಿಣೆ' ಎನಿಸಿಕೊಳ್ಳುವುದೆ ?

10. ಅಸ್ಪೃಶ್ಯತೆಯ ಕಾರಣದಿಂದಾಗಿ X ಎಂಬ ಒಬ್ಬ ಹರಿಜನ ವ್ಯಕ್ತಿಗೆ ಒಂದು ಸಾರ್ವಜನಿಕ ಮನರಂಜನಾ ಸ್ಥಳಕ್ಕೆ ಪ್ರವೇಶ ನಿರಾಕರಿಸಲಾಯಿತು. ಈ ಬಗ್ಗೆ ದೂರು ಸಲ್ಲಿಸಲಾಯಿತು, ಆದರೆ ತನಿಖಾಧಿಕಾರಿಯು ಈ ದೂರಿನ ತನಿಖೆ ನಡೆಸುವಲ್ಲಿ ಅಲಕ್ಷ್ಯ ತಾಳಿದ. ಸಿವಿಲ್ ಹಕ್ಕುಗಳ ರಕ್ಷಣಾ ಕಾಯಿದೆ, 1955 ರ ಅನ್ವಯ ಇದು ಯಾವುದಾದರೂ ತಪ್ಪು ಮಾಡಿದ ಪ್ರಕರಣವಾಗುತ್ತದೆಯೆ ?

**11.** Mani had sent milk in cans to Shankar by bus. As per practice, Shankar had to test the milk before accepting it. But, before it was tested and accepted, the Food Inspector took a sample of the milk. The milk was found adulterated. Shankar is prosecuted for selling adulterated milk, under the Prevention of Food Adulteration Act, 1954. Is he liable ?

**11.** ಮಣಿ ಎಂಬಾತನು ಶಂಕರ್ ಎಂಬಾತನಿಗೆ ಕ್ಯಾನ್‌ಗಳಲ್ಲಿ ಹಾಲನ್ನು ಬಸ್ ಮೂಲಕ ಕಳುಹಿಸಿದ್ದ. ಪದ್ಧತಿಯಂತೆ ಶಂಕರ್ ಇದನ್ನು ಸ್ವೀಕರಿಸುವ ಮೊದಲು, ಹಾಲನ್ನು ಪರೀಕ್ಷಿಸಬೇಕಿತ್ತು. ಇದರ ಪರೀಕ್ಷಣೆ ಮಾಡಿ ಒಪ್ಪಿಕೊಳ್ಳುವ ಮೊದಲೇ ಆಹಾರ ನಿರೀಕ್ಷಣಾ ಅಧಿಕಾರಿಯು ಹಾಲಿನ ಸ್ಯಾಂಪಲ್ ಪರೀಕ್ಷಿಸಿದ. ಹಾಲಿನ ಕಲಬೆರಕೆ ಪತ್ತೆಯಾಯಿತು. ಆಹಾರ ಕಲಬೆರಕೆ ತಡೆಗಟ್ಟುವ ಕಾಯಿದೆ, 1954 ರ ಅನ್ವಯ, ಕಲಬೆರಕೆ ಹಾಲನ್ನು ಮಾರುತ್ತಿರುವುದಕ್ಕಾಗಿ ಶಂಕರ್‌ನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಆತ ತಪ್ಪಿತಸ್ಥನಾಗುವನೆ ?

## PART C

*6×15=90*

*Answer each question in about 150 words. Each question carries 15 marks.*

**12.** When will 'Culpable homicide' constitute Murder ? Illustrate.

**13.** When will an act or its omission constitute a tort of negligence ? Give examples.

**14.** In some situations, parties having not made a contract, the law implies a contract, between them. Briefly explain these situations, which become enforceable by law.

**15.** What is meant by 'Restrictive Trade Practice' under the Monopolies and Restrictive Trade Practices Act, 1969 ? Explain any two restrictive trade practices permitted to be continued by the Act.

**16.** Explain the rights of an Agent against his Principal.

**17.** Explain the Banker-Customer relationship.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** 'ಅಪರಾಧಿಕ ನರಹತ್ಯೆ'ಯು ಯಾವಾಗ 'ಕೊಲೆ' ಎನಿಸಿಕೊಳ್ಳುತ್ತದೆ ? ವಿವರಿಸಿ.

**13.** ಒಂದು ಕ್ರಿಯೆ ಅಥವಾ ಅದರ ಲೋಪವು ಯಾವಾಗ 'ಅಲಕ್ಷ್ಯದ ಅಪಕೃತ್ಯ' ಎನಿಸಿಕೊಳ್ಳುತ್ತದೆ ? ಉದಾಹರಣೆಗಳನ್ನು ಕೊಡಿ.

**14.** ಕೆಲವೊಂದು ಸನ್ನಿವೇಶಗಳಲ್ಲಿ, ವ್ಯಕ್ತಿಗಳ ನಡುವೆ ಕರಾರು ಮಾಡಿಕೊಂಡಿಲ್ಲದಿದ್ದರೂ, ಅಲ್ಲಿ ಒಂದು ಕರಾರು ಇರುವುದನ್ನು ಕಾನೂನು ಧ್ವನಿಸುತ್ತದೆ. ಕಾನೂನಿನಿಂದ ಜಾರಿಗೆ ತರಬಹುದಾದ ಇಂತಹ ಕರಾರಿನ ಕೆಲವು ಸನ್ನಿವೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**15.** ಏಕಸ್ವಾಮ್ಯ ಹಾಗೂ ನಿರ್ಬಂಧನಾತ್ಮಕ ವ್ಯಾಪಾರ ಪದ್ಧತಿಗಳ ಕಾಯಿದೆ, 1969 ರ ಪ್ರಕಾರ 'ನಿರ್ಬಂಧನಾತ್ಮಕ ವ್ಯಾಪಾರ ಪದ್ಧತಿ' ಎಂದರೇನು ? ಈ ಕಾನೂನಿನಿಂದ, ಮುಂದುವರೆಸಬಹುದು ಎಂದು ಅನುಮತಿಸಲ್ಪಟ್ಟಿರುವ ಯಾವುದಾದರೂ. ಎರಡು ನಿರ್ಬಂಧನಾತ್ಮಕ ವ್ಯಾಪಾರ ಪದ್ಧತಿಗಳನ್ನು ವಿವರಿಸಿ.

**16.** ಮೂಲಕರ್ತನಿಗೆ ಪ್ರತಿಯಾಗಿ ಒಬ್ಬ ಏಜೆಂಟನಿಗೆ ಇರುವ ಹಕ್ಕುಗಳೇನು ? ವಿವರಿಸಿ.

**17.** ಬ್ಯಾಂಕರ್ - ಗ್ರಾಹಕ ಸಂಬಂಧವನ್ನು ವಿವರಿಸಿ.

## PART D

*3×30=90*

*Answer any* **three** *of the following questions, each in about 300 words. Each question carries 30 marks.*

**18.** Explain the ingredients required to constitute an offence of robbery.

A and B hold M. C puts his hand in M's pockets and picks up his mobile phone. After making two calls from the phone, it is returned to M. Has any offence been committed ?

**19.** When does the vicarious liability for torts committed by another arise ? Answer with the help of decided cases.

Hospital authorities invite a famous surgeon to operate upon an inpatient. Surgery is negligently done. The patient wants to sue the hospital authorities. The hospital says that the surgeon is not its employee. Decide, stating reasons.

**20.** Discuss the law relating to minor's agreement. Refer to statutory provisions and decided cases.

A minor borrows money to purchase necessaries for him. Can the loan advanced by the money-lender be recovered ?

**21.** When does property in the goods sold, under the Sale of Goods Act, pass to the buyer ?

Goods are delivered by A to B on 'Sale or Return' basis. B delivers these goods to C, on similar terms. C, in turn, hands them to D. D loses them. Can A recover the price from B, C or D ? State your reasons.

**22.** State the different modes of dissolution of a firm. After dissolution, who can use the goodwill of the firm ?

A Hindu Undivided Family is carrying on family business of manufacturing and selling sarees. The *karta* of the family dies. Is there dissolution of the HUF ? Give reasons for your answer.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಒಂದು ಅಪರಾಧವು 'ಸುಲಿಗೆ' ಎನಿಸಿಕೊಳ್ಳಬೇಕಾದರೆ ಏನೇನು ಅಂಶಗಳಿರಬೇಕು ?
A ಮತ್ತು B ಎಂಬುವರು M ಎಂಬಾತನನ್ನು ಹಿಡಿದು ನಿಲ್ಲಿಸುತ್ತಾರೆ. C ಎಂಬಾತನು M ನ ಜೇಬಿಗೆ ಕೈಹಾಕಿ ಆತನ ಮೊಬೈಲ್ ಫೋನ್ ತೆಗೆದುಕೊಳ್ಳುತ್ತಾನೆ. ಆದರಿಂದ ಎರಡು ಕರೆಗಳನ್ನು ಮಾಡಿದ ನಂತರ ಅದನ್ನು M ಗೆ ಹಿಂದಿರುಗಿಸುತ್ತಾನೆ. ಇಲ್ಲಿ ಏನಾದರೂ ಅಪರಾಧ ನಡೆದಿದೆಯೆ ?

**19.** ಇನ್ನೊಬ್ಬರಿಂದ ನಡೆದ ಅಪಕೃತ್ಯಕ್ಕೆ ಯಾವಾಗ ಬದಲಿ ಹೊಣೆ ಉದ್ಭವಿಸುತ್ತದೆ ? ತೀರ್ಮಾನವಾಗಿರುವ ಪ್ರಕರಣಗಳ ನೆರವಿನಿಂದ ಉತ್ತರಿಸಿ.
ಒಬ್ಬ ಒಳರೋಗಿಯ ಮೇಲೆ ಶಸ್ತ್ರ ಚಿಕಿತ್ಸೆ ನಡೆಸುವುದಕ್ಕಾಗಿ ಆಸ್ಪತ್ರೆ ಅಧಿಕಾರಿಗಳು ಒಬ್ಬ ಶಸ್ತ್ರ ಚಿಕಿತ್ಸಾ ತಜ್ಞರನ್ನು ಕರೆಸುತ್ತಾರೆ. ಶಸ್ತ್ರ ಚಿಕಿತ್ಸೆಯಲ್ಲಿ ತೋರಿದ ಅಸಡ್ಡೆಗಾಗಿ ಒಳರೋಗಿಯು ಆಸ್ಪತ್ರೆಯ ಅಧಿಕಾರಿಗಳ ವಿರುದ್ಧ ದಾವೆ ಹೂಡಲು ಬಯಸುತ್ತಾನೆ. 'ಶಸ್ತ್ರ ಚಿಕಿತ್ಸಾ ತಜ್ಞರು ನಮ್ಮ ಉದ್ಯೋಗಿಯಲ್ಲ' ಎಂದು ಆಸ್ಪತ್ರೆಯವರು ತಿಳಿಸುತ್ತಾರೆ. ನಿಮ್ಮ ತೀರ್ಮಾನಕ್ಕೆ ಕಾರಣಗಳನ್ನು ನೀಡಿ.

**20.** ಅಪ್ರಾಪ್ತ ವಯಸ್ಕರ ಒಪ್ಪಂದಕ್ಕೆ ಸಂಬಂಧಿಸಿದ ಕಾನೂನನ್ನು ಕುರಿತು ಚರ್ಚಿಸಿ. ಶಾಸನಬದ್ಧ ಅವಕಾಶಗಳು ಮತ್ತು ತೀರ್ಮಾನಗೊಂಡ ಪ್ರಕರಣಗಳನ್ನು ಉಲ್ಲೇಖಿಸಿ.
ಅಪ್ರಾಪ್ತ ವಯಸ್ಕನು ತನಗೆ ಅಗತ್ಯವಾದ ವಸ್ತುಗಳನ್ನು ಖರೀದಿಸುವುದಕ್ಕಾಗಿ ಹಣವನ್ನು ಎರವಲು ಪಡೆಯುತ್ತಾನೆ. ಲೇವಾದೇವಿಗಾರನು ನೀಡಿದ ಸಾಲವನ್ನು ವಸೂಲು ಮಾಡಿಕೊಳ್ಳಲು ಸಾಧ್ಯವೆ ?

**21.** ಸರಕುಗಳ ಮಾರಾಟ ಕಾಯಿದೆಯ ಅನ್ವಯ, ಮಾರಾಟವಾದ ಸರಕಿನ ಸಂಪತ್ತು ಕೊಂಡುಕೊಂಡವರಿಗೆ ಯಾವಾಗ ಲಭ್ಯವಾಗುತ್ತದೆ ?
'ಮಾರಾಟ ಅಥವಾ ಹುಟ್ಟುವಳಿ' ಆಧಾರದ ಮೇಲೆ A ಯಿಂದ B ಗೆ ಸರಕುಗಳ ಬಟವಾಡೆಯಾಗಿದೆ. B ಯು C ಗೆ ಇದೇ ಷರತ್ತುಗಳ ಅನ್ವಯ ಸರಕುಗಳನ್ನು ಬಟವಾಡೆ ಮಾಡುತ್ತಾನೆ. C ಯು ಅದನ್ನು D ಗೆ ವಹಿಸುತ್ತಾನೆ. ಆದರೆ D ಈ ವಸ್ತುಗಳನ್ನು ಕಳೆದುಕೊಳ್ಳುತ್ತಾನೆ. A ಯು ಇದರ ಬೆಲೆಯನ್ನು B, C ಅಥವಾ D ಯಿಂದ ಮರುವಸೂಲಿ ಮಾಡಿಕೊಳ್ಳಬಹುದೆ ? ನೀವು ಕೊಡುವ ಕಾರಣಗಳೇನು ?

**22.** ಒಂದು ಉದ್ಯಮವನ್ನು ವಿಘಟಿಸಬಹುದಾದ ವಿವಿಧ ವಿಧಾನಗಳನ್ನು ವಿವರಿಸಿ. ವಿಘಟನೆಯ ನಂತರ ಉದ್ಯಮದ ಸುನಾಮವನ್ನು ಯಾರು ಬಳಸಬಹುದು ?
ಒಂದು ಹಿಂದೂ ಅವಿಭಕ್ತ ಕುಟುಂಬವು ಸೀರೆಗಳನ್ನು ತಯಾರಿಸುವ ಹಾಗೂ ಮಾರುವ ಮನೆ ತನದ ವ್ಯಾಪಾರವನ್ನು ಮಾಡುತ್ತಿದೆ. ಕುಟುಂಬದ ಕರ್ತನು ಮರಣ ಹೊಂದುತ್ತಾನೆ. ಈ ಹಿಂದೂ ಅವಿಭಕ್ತ ಕುಟುಂಬದ ವಿಘಟನೆಯಾಗುವುದೆ ? ನಿಮ್ಮ ತೀರ್ಮಾನಕ್ಕೆ ಕಾರಣಗಳೇನು ?